**ದಿಃ30.10.2025 ರಂದು ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**
**ಪಾಟೀ ಸವಾಲು ಃ ಶ್ರೀ.ಎಲ್.ಎನ್.ಎಸ್ ವಕೀಲರಿಂದ ಪಿರ್ಯಾದಿದಾರ ಪರವಾಗಿ**

1. ಪಿರ್ಯಾದಿದಾರ ನನಗೆ ಇವತ್ತಿನಿಂದ 5 ವರ್ಷದ ಹಿಂದಿನಿಂದ ಪರಿಚಿತ. ನನ್ನ ಮಗಳು ಮುರಾರ್ಜಿ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದರಿಂದ ಪರಿಚಯ ಇದೆ. ಪಿರ್ಯಾದಿದಾರ ಅಲ್ಲಿ ಸೆಕ್ಯೂರಿಟಿ ಗಾರ್ಡ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಾನು 10 ನೇ ತರಗತಿವರೆಗೆ ವಿದ್ಯಾಬ್ಯಾಸ ಮಾಡಿದ್ದೇನೆ. ನಿಮ್ಮ ಮತ್ತು ಪಿರ್ಯಾದಿದಾರನ ನಡುವೆ ಈ ಪ್ರಕರಣದ ವ್ಯವಹಾರಕ್ಕೆ ಸಂಬಂಧಿಸಿದಂತೆ ಎಷ್ಟು ವರ್ಷದ ಹಿಂದೆ ವ್ಯವಹಾರ ಆಯಿತು ಎಂದರೆ 2023 ರಲ್ಲಿ ಎಂದು ಹೇಳುತ್ತಾರೆ. ಈ ಪ್ರಕರಣದ ವ್ಯವಹಾರಕ್ಕೆ ಸಂಬಂಧಿಸಿದಂತೆ ಪಿರ್ಯಾದಿದಾರ ನಿಮಗೆ ದಿಃ21.03.2024 ರಂದು ನೋಟಿಸ್ ನೀಡಿದ್ದ ಎಂದರೆ ಸರಿ. ಸದರಿ ಪಿರ್ಯಾದಿದಾರ ನೋಟಿಸ್ ದಿಃ26.03.2024 ರಂದು ಜಾರಿಯಾಯಿತು ಎಂದರೆ ಸರಿ. ನೋಟಿಸ್ ಜಾರಿಯಾದ ನಂತರ ನೀವು ಪಿರ್ಯಾದಿದಾರನಿಗೆ ಉತ್ತರ ನೀಡಿದ್ದೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಪಿರ್ಯಾದಿದಾರ ಈ ಪ್ರಕರಣವನ್ನು ಏತಕ್ಕಾಗಿ ನಿಮ್ಮ ವಿರುದ್ದ ಸಲ್ಲಿಸಿದ್ದಾನೆ ಎಂದು ನಿಮಗೆ ಸಂಪೂರ್ಣ ಮಾಹಿತಿ ಇದೆ ಎಂದರೆ ಸರಿ. ನೀವು ಮಾರ್ಚ 2023 ರಲ್ಲಿ ಪಿರ್ಯಾದಿದಾರನಿಂದ ಈ ಪ್ರಕರಣದ ಮಾಹಿತಿ ಪ್ರಕಾರ ಹಣ ಪಡೆದಿದ್ದೀರಿ ಎಂದರೆ ಸರಿ. ಸಾಕ್ಷಿಯು ಮುಂದುವರೆದು 2023 ರಲ್ಲಿ 50 ಸಾವಿರ ನೀಡಿ 2 ತಿಂಗಳ ನಂತರ ಮತ್ತೆ 50 ಸಾವಿರ ನೀಡಿರುತ್ತಾನೆ ಎಂದು ನುಡಿಯುತ್ತಾರೆ. ಆ ರೀತಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಪಿರ್ಯಾದಿಯಲ್ಲಿ ನಮೂದಿಸಿದ ವ್ಯವಹಾರಕ್ಕೆ ಸಂಬಂಧಿಸಿದಂತೆ ನೀವು ಮಾರ್ಚ 2023 ರಿಂದ 8 ತಿಂಗಳ ಒಳಗೆ ವ್ಯವಹಾರ ಸರಿ ಪಡಿಸಿಕೊಳ್ಳುತ್ತೀರಿ ಎಂದು ಮಾತುಕತೆ ಆಗಿತ್ತು ಎಂದರೆ ಸುಳ್ಳು ಎಂದು ಸಾಕ್ಷಿ ನುಡಿದು 1 ವರ್ಷದ ಅವಧಿ ಒಳಗಡೆ ಎಂದು ಹೇಳುತ್ತಾರೆ. ಆ ರೀತಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

2. 8 ತಿಂಗಳ ಅವಧಿ ಮುಗಿದ ನಂತರ ಪಿರ್ಯಾದಿದಾರ ನಿಮಗೆ ತಾನು ನೀಡಿದ 2 ಲಕ್ಷ 50 ಸಾವಿರ ರೂಪಾಯಿಯನ್ನು ಹಿಂದಿರುಗಿಸುವಂತೆ ಕೇಳಿಕೊಂಡ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು 1 ವರ್ಷದ ಅವಧಿಗೆ ಮಾತುಕತೆ ಆಗಿದೆ ಎಂದು ನೋಟಿಸ ಕಳುಹಿಸಿದ್ದು ತಪ್ಪು ಇದೆ ಎಂದು ಕಬ್ಬಿನ ಬಿಲ್ಲು ಬಂದ ನಂತರ ಹಣ ನೀಡುತ್ತೇನೆ ಮಾತುಕತೆ ಆಡೋಣ ಎಂದು ಹೇಳಿದ್ದೆ ಎಂದು ಹೇಳುತ್ತಾರೆ. ಆ ರೀತಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ದಿಃ01.03.2024 ರಂದು ಚೆಕ ನಂ.007233 ಕರ್ನಾಟಕ ವಿಕಾಸ್ ಗ್ರಾಮೀಣ ಬ್ಯಾಂಕ ಭಂಟನೂರ ಶಾಖೆ ಮೇಲಿನ ಚೆಕ್ಕನ್ನು ಅವರಿಗೆ ನೀಡಿದಿರಿ ಎಂದರೆ ಸುಳ್ಳು. ಸಾಕ್ಷಿ ಮುಂದುವರೆದು ನಾನು ತಲಾ 50 ಸಾವಿರ ರೂಪಾಯಿ ಹಣ ಪಡೆಯುವಾಗ ತಲಾ 1 ಚೆಕ್ಕನ್ನು ಪಿರ್ಯಾದಿದಾರನಿಗೆ ನೀಡಿದ್ದೆ ಎಂದು ಹೇಳುತ್ತಾರೆ. ಚೆಕ ನಂಬರ ಹೇಳಬಹುದಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ.

3. ಸಾಕ್ಷಿಗೆ ಈಗ ನಿಪಿ-1 ನ್ನು ತೋರಿಸುತ್ತಿದ್ದು, ಅದು ತನ್ನ ಖಾತೆಗೆ ಸೇರಿದ್ದು ಎಂದು ಮತ್ತು ನಿಪಿ-1(ಎ) ಸಹಿ ತನ್ನದು ಎಂದು ಒಪ್ಪಿಕೊಳ್ಳುತ್ತಾರೆ. ನಿಪಿ-1 ರ ಮೇಲಿನ ಉಳಿದ ಬರವಣಿಗೆ ನಿಮ್ಮದು ಎಂದರೆ ಸರಿಯಲ್ಲ. ನಿಮ್ಮ ಪ್ರಕಾರ ಯಾರು ಬರೆದಿದ್ದಾರೆ ಎಂದರೆ ಖಾಲಿ ಚೆಕಗೆ ಸಹಿ ಮಾಡಿ ನೀಡಿದ್ದೆ ಎಂದು ಹೇಳುತ್ತಾರೆ. ನನ್ನ ಪ್ರಕಾರ ಖಾಲಿ ಚೆಕ ನೀಡುವ ಸಮಯದಲ್ಲಿ ನಾನು ಮತ್ತು ಪಿರ್ಯಾದಿದಾರ ಇಬ್ಬರೇ ಇದ್ದೆವು. ಸದರಿ ಚೆಕ್ಕನ್ನು 2023 ರಲ್ಲಿ ನೀಡಿದ್ದು ದಿನಾಂಕ ನಿಖರವಾಗಿ ನೆನಪಿಲ್ಲ, ಅದನ್ನು ಮುರಾರ್ಜಿ ವಸತಿ ಶಾಲೆಯಲ್ಲಿ ಪಿರ್ಯಾದಿದಾರ ಕರ್ತವ್ಯದ ಮೇಲೆ ಇದ್ದಾಗ ನೀಡಿರುತ್ತೇನೆ. ಆ ರೀತಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನನ್ನ ಪ್ರಕಾರ 2 ನೇ ಚೆಕ ನೀಡುವ ಸಮಯದಲ್ಲಿ ಕೇವಲ ನಾನು ಮತ್ತು ಪಿರ್ಯಾದಿದಾರ ಮಾತ್ರ ಇದ್ದೆವು. ಸದರಿ ಚೆಕ ಖಾಲಿ ಚೆಕ ಆಗಿರುತ್ತದೆ. ಆ ರೀತಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಚೆಕ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ ಭಂಟನೂರ ಶಾಖೆಯದ್ದು ಇದ್ದು ಅದರ ಸಂಖ್ಯೆ ನನಗೆ ನೆನಪಿಲ್ಲ. ಪಿರ್ಯಾದಿದಾರ ಸಲ್ಲಿಸಿದ ವ್ಯವಹಾರಕ್ಕೆ ಸಂಬಂಧಿಸಿದಂತೆ ಚೆಕ ಹೊರತುಪಡಿಸಿ ಬೇರೆ ಯಾವುದಾದರೂ ದಾಖಲಾತಿ ಬರೆಯಲಾಗಿದೆಯಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನೀವು ಈ ಪ್ರಕರಣ ದಾಖಲಾದ ನಂತರ ಹಿರಿಯರ ಸಮಕ್ಷಮ ಈ ಪ್ರಕರಣ ಸಾಕ್ಷ್ಯ ಹೇಳುವ ಪೂರ್ವದಲ್ಲಿ ಯಾವುದಾದರೂ ಅಪಸಾತಗೆ ಮಾತುಕತೆ ಮಾಡಿದಿರಾ ಎಂದರೆ ಹೌದು ಎಂದು ಸಾಕ್ಷಿ ಹೇಳುತ್ತಾರೆ. ಪಿರ್ಯಾದಿದಾರ ನನ್ನ ಭಂಟನೂರ

ಮನೆಗೆ ಬಂದು ನನ್ನೊಂದಿಗೆ ರಾಜೀ ಮಾಡಿಕೊಂಡು ನನ್ನ ಮನೆಯಲ್ಲಿ 1 ಲಕ್ಷ 30 ಸಾವಿರ ರೂಪಾಯಿ ಪಡೆದು ಅದರಲ್ಲಿ ನನ್ನ ಬಳಿ ಇದ್ದ 80 ಸಾವಿರ ರೂಪಾಯಿ, ಹಣಮಂತ ರಾಮಪ್ಪ ಅಂಬಲಜೇರಿ ಅವರ ಕಡೆಯಿಂದ 50 ಸಾವಿರ ಪಡೆದು ಪಿರ್ಯಾದಿದಾರನಿಗೆ ನೀಡಿರುತ್ತೇನೆ. ಅದಕ್ಕೆ ಸಂಬಂಧಿಸಿದಂತೆ ದಿಃ21.10.2024 ರಂದು ನ್ಯಾಯಾಲಯದಲ್ಲಿ ಆತ ಒಪ್ಪಿಕೊಂಡಿರುತ್ತಾನೆ. ಆ ರೀತಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಪಿರ್ಯಾದಿದಾರನಿಗೆ 1 ಲಕ್ಷ 30 ಸಾವಿರ ವ್ಯವಹಾರ ಮುಗಿಸೋಣ ಎಂದು ಸದರಿ ಮೊತ್ತ ಬಂದಿದೆ ಎಂದು ನ್ಯಾಯಾಲಯದಲ್ಲಿ ಹೇಳು ಎಂದು ನಂತರ ಸದರಿ 1 ಲಕ್ಷ 30 ಸಾವಿರಗಳನ್ನು ನೀಡುತ್ತೇನೆ ಎಂದು ನೀವು ಹೇಳಿದ್ದೀರಿ ಎಂದರೆ ಸರಿಯಲ್ಲ. ದಿಃ20.10.2024 ರಂದು ನಿಮ್ಮ ಮನೆಯಲ್ಲಿ ರಾಜೀ ಮಾಡಿಕೊಂಡಿರಿ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

4. ನಿಮ್ಮ ಮೇಲಿನ ವಿಶ್ವಾಸದಿಂದ ಪಿರ್ಯಾದಿದಾರ ನ್ಯಾಯಾಲಯದಲ್ಲಿ 1 ಲಕ್ಷ 30 ಸಾವಿರ ಬಂದಿದೆ ಎಂದು ಹೇಳಿ ರೋಜನಾಮೆಯಲ್ಲಿ ಸಹಿ ಮಾಡಿದ ಎಂದರೆ ಸರಿಯಲ್ಲ. ನೀವು ಆತ ನಂಬಿಕೆಯಿಂದ ನ್ಯಾಯಾಲಯದಲ್ಲಿ ಹೇಳಿದಂತಹ 1 ಲಕ್ಷ 30 ಸಾವಿರ ರೂಪಾಯಿಯನ್ನು ಪಿರ್ಯಾದಿದಾರನಿಗೆ ನೀಡಿಲ್ಲ ಎಂದರೆ ಸರಿಯಲ್ಲ. ಪಿರ್ಯಾದಿದಾರ ನಿಮಗೆ ಕ್ಯಾಂಟಿನ ಬಳಿ ಅದೇ ದಿನ ನ್ಯಾಯಾಲಯದಲ್ಲಿ ಹೇಳಿದಂತೆ ಹಣ ನೀಡುವಂತೆ ಕೇಳಿಕೊಂಡ ಎಂದರೆ ಸರಿಯಲ್ಲ. ಅಲ್ಲಿ ನೀವು ಪಿರ್ಯಾದಿದಾರನಿಗೆ ನಿಮ್ಮ ಬಳಿ ಹಣ ಇಲ್ಲ ಎಂದು 1 ಚೆಕ ಬರೆದು ನೀಡಿದಿರಿ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ಒಂದು ಚೆಕ್ಕನ್ನು ತೋರಿಸುತ್ತಿದ್ದು ಅದು ನಿಮ್ಮ ಖಾತೆಗೆ ಸೇರಿದ್ದು ಮತ್ತು ಅದರ ಮೇಲಿನ ಸಹಿ ನಿಮ್ಮದು ಎಂದರೆ ಸರಿ. ಸದರಿ ಚೆಕ ಸಂಖ್ಯೆ 012383 ನ್ನು ನಿಪಿ-6 ಎಂದು, ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ನಿಪಿ-6 ಚೆಕ್ಕನ್ನು ನೀವು ನ್ಯಾಯಾಲಯದಲ್ಲಿ ಇದ್ದ ಕ್ಯಾಂಟಿನ ಪಕ್ಕದಲ್ಲಿ ಬರೆದು ಪಿರ್ಯಾದಿದಾರನಿಗೆ ನೀಡಿದಿರಿ ಎಂದರೆ ಸರಿಯಲ್ಲ. ಆ ರೀತಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಪಿರ್ಯಾದಿದಾರ ಚೆಕ್ಕನ್ನು ನಗದೀಕಣಕ್ಕಾಗಿ ತೆಗೆದುಕೊಂಡು ಹೋದಾಗ ಚೆಕ ಮೇಲೆ ಸೆಲ್ಫ ಎಂದು ಬರೆದಿದೆ ಎಂದು ನಗದೀಕರಣ ಮಾಡಲು ಬರುವುದಿಲ್ಲ ಎಂದು ಹೇಳಿದರು ಎಂದರೆ ಸರಿಯಲ್ಲ. ನಿಮಗೆ ಸದರಿ ವಿಷಯ ತಿಳಿಸಿದಾಗ ನೀವು ನಗದು ರೂಪದಲ್ಲಿ ಹಣ ನೀಡುತ್ತೀರಿ ಎಂದು ಆತನಿಗೆ ತಿಳಿಸಿದಿರಿ ಎಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

5. ದಿಃ21.12.2024 ಕ್ಕೆ ವಾಟ್ಸಪ ಮೂಲಕ ಖಾತೆ ವಿವರಗಳನ್ನು ನೀಡಬೇಕು ಎಂದು ಹಣ ಕಳುಹಿಸುತ್ತೇನೆ ಎಂದು ಪಿರ್ಯಾದಿಗೆ ಹೇಳಿದ್ದೀರಿ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ಒಂದು ದಾಖಲಾತಿ ತೋರಿಸುತ್ತಿದ್ದು ಬಸವರಾಜ ಕೆ. ಎಂದರೆ ನೀವೇ ಎಂದರೆ ಹೌದು ಎಂದು ಹೇಳುತ್ತಾರೆ. ಅದು ಝುರಾಕ್ಸ ದಾಖಲಾತಿ ಆದ ಕಾರಣ ನಿಶಾನೆ ಎಂದು ಗುರುತಿಸಲು ಆಗುವುದಿಲ್ಲ. ಸದರಿ ವಾಟ್ಸಪ್‌ನಲ್ಲಿ ತೋರಿಸಿದಂತೆ ತನ್ನ ಖಾತೆಯ ವಿವರವನ್ನು ಪಿರ್ಯಾದಿದಾರ ನಿಮಗೆ ಕಳುಹಿಸಿದ ಎಂದರೆ ಸರಿಯಲ್ಲ. ನೀವು ಒಪ್ಪಿಕೊಂಡಂತೆ ಹಣ ನೀಡದ ಕಾರಣ ಪಿರಾದಿದಾರ ಮತ್ತು ಆತನ ವಕೀಲರು ಜಂಟಿ ಮೆಮೋ ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ಪಿರ್ಯಾದಿದಾರ ಪ್ರಕರಣ ಮುಂದುವರೆಸಿದ ಎಂದರೆ ಸರಿಯಲ್ಲ. ನೀವು ನಿಪಿ-6 ಚೆಕ್ಕನ್ನು ನ್ಯಾಯಾಲಯದ ಕ್ಯಾಂಟಿನ ಪಕ್ಕದಲ್ಲಿ ಪಿರ್ಯಾದಿದಾರನಿಗೆ ಯಾವ ಕಾರಣಕ್ಕಾಗಿ ನೀಡಿದಿರಿ ಎಂದರೆ ಸುಳ್ಳು ಎಂದು ಸಾಕ್ಷಿ ಹೇಳುತ್ತಾರೆ. ಪಿರ್ಯಾದಿದಾರ ನಿಮ್ಮ ಮೇಲಿನ ವಿಶ್ವಾಸದಿಂದ ನ್ಯಾಯಾಲಯದಲ್ಲಿ ಸಹಿ ಮಾಡಿದ್ದರು ಸಹ ನೀವು ಪಿರ್ಯಾದಿದಾರನಿಗೆ ಯಾವುದೇ ಮೊತ್ತವನ್ನು ಇವತ್ತಿನವರೆಗೂ ನೀಡಿಲ್ಲ ಎಂದರೆ ಸರಿಯಲ್ಲ. ನೀವು ಪಿರ್ಯಾದಿದಾರನಿಂದ ಪಡೆದ 2 ಲಕ್ಷ 50 ಸಾವಿರ ರೂಪಾಯಿಯನ್ನು ಆತನಿಗೆ ಹಿಂದಿರುಗಿಸದೇ ಮತ್ತೆ ನ್ಯಾಯಾಲಯದ ಮುಂದೆ 1 ಲಕ್ಷ 30 ಸಾವಿರ ರೂಪಾಯಿಯನ್ನು ಆತನಿಗೆ ನೀಡಿದ್ದೀರಿ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಆ ರೀತಿ ಪಿರ್ಯಾದಿದಾರನಿಗೆ ಮೋಸ ಮಾಡಿದ್ದರಿಂದ ನಿಪಿ-1 ರಂತೆ 2 ಲಕ್ಷ 50 ಸಾವಿರ ರೂಪಾಯಿಗಳನ್ನು ಪಿರ್ಯಾದಿದಾರನಿಗೆ ನೀವು ನೀಡಲು ಭಾದ್ಯಸ್ಥರು ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

ಸಹಿ/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ಮುಧೋಳ